# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

ಸ್ವಾತಂತ್ರ್ಯದ
ಅಮೃತ ಮಹೋತ್ಸವ

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:14.11.2022

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ: 08192-208029, ಫ್ಯಾಕ್ಸ್ ಸಂಖ್ಯೆ: 08192-208008


: ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ :

ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/155/2022-23/3346(A) ದಿನಾಂಕ:29.11.2022

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು ಗಳಿಗೆ.

ಮಾನ್ಯರೆ,

ವಿಷಯ : ದಿನಾಂಕ:14.11.2022 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ-III ರ ಪ್ರಕರಣ 16(i) ರ ರೀತ್ಯ ದಿನಾಂಕ:14.11.2022 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು - ಅಧ್ಯಾಯ-III ರ ಪ್ರಕರಣ 16(i)ರ ರೀತ್ಯ ನಡಾವಳಿ ತಲುಪಿದ ಏಳು ದಿನಗಳೊಳಗಾಗಿ ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007.

ಪ್ರತಿಗಳು:

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು- 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು-01.
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್‌ನ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ವಿಶ್ವವಿದ್ಯಾನಿಲಯದ ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ನಿರ್ದೇಶಕರು, ಸಿ.ಡಿ.ಸಿ/ಪಿ.ಎಂ.ಇ./ದೈಹಿಕ ಶಿಕ್ಷಣ/ಐಕ್ಯೂಎಸಿ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ಸಂಯೋಜನಾಧಿಕಾರಿಗಳು, ಸ್ನಾತಕೋತ್ತರ ಕೇಂದ್ರ, ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಹೆದ್ದಾರಿ-13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ.
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ
15. ಉಪಕುಲಸಚಿವರು/ಸಹಾಯಕ ಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ/ಸಿ.ಡಿ.ಸಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ.
16. ಆಪ್ತ ಕಾರ್ಯಾಲಯ, ಕುಲಪತಿಗಳು/ಕುಲಸಚಿವರು ಆಪ್ತಕಾರ್ಯಾಲಯ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
17. ಹೆಚ್ಚುವರಿ ಪ್ರತಿ

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007.

### ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:14.11.2022ರಂದು ಪೂರ್ವಾಹ್ನ 11.30ಕ್ಕೆ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ, ಮಾನ್ಯ ಕುಲಪತಿಗಳು. : ಅಧ್ಯಕ್ಷರು
2. ಡಾ. ರಾಜಶೇಖರ್ ಹೆಬ್ಬಾರ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ. : ಸದಸ್ಯರು
3. ಶ್ರೀಮತಿ ಗೀತಾ ಜಿ., ಮೈಸೂರು. : ಸದಸ್ಯರು
4. ಡಾ: ಶ್ರೀಧರ್ ಎಸ್. ಶಿವಮೊಗ್ಗ : ಸದಸ್ಯರು
5. ಶ್ರೀಮತಿ ವಿಜಯಲಕ್ಷ್ಮಿ ಹಿರೇಮಠ್, ದಾವಣಗೆರೆ. : ಸದಸ್ಯರು
6. ಶ್ರೀ ಪವನ್ ಜಿ.ಎಂ., ಹಿರೇಗುಂಟನೂರು, ಚಿತ್ರದುರ್ಗ ಜಿಲ್ಲೆ. : ಸದಸ್ಯರು
7. ಶ್ರೀ ಆಶಿಷರೆಡ್ಡಿ ಎಂ. ಬೆಂಗಳೂರು. : ಸದಸ್ಯರು
8. ಡಾ. ಜಿ.ಪಿ. ರಾಮನಾಥ್, ಹಾಸನ. : ಸದಸ್ಯರು
9. ಶ್ರೀ ಇನಾಯತ್‌ವುಲ್ಲಾ ಟಿ. ಹರಿಹರ. : ಸದಸ್ಯರು
10. ಡಾ. ನಾಗರಾಜ ಜಿ.ಯು., ಪ್ರಾಂಶುಪಾಲರು. : ಸದಸ್ಯರು
11. ಡಾ. ರವಿ ಟಿ.ಎಸ್., ಪ್ರಾಂಶುಪಾಲರು. : ಸದಸ್ಯರು
12. ಡಾ. ದಾಸಯ್ಯ ಜಿ., ಪ್ರಾಂಶುಪಾಲರು. : ಸದಸ್ಯರು
13. ಡಾ. ಪ್ರೇಮಾ ಪಿ.ಎಂ., ಪ್ರಾಂಶುಪಾಲರು. : ಸದಸ್ಯರು
14. ಪ್ರೊ. ರಾಮಲಿಂಗಪ್ಪ, ಡೀನರು, ವಿಜ್ಞಾನ ನಿಕಾಯ. : ಸದಸ್ಯರು
15. ಪ್ರೊ. ರಂಗಪ್ಪ ಕೆ. ಬಿ., ಪ್ರಾಧ್ಯಾಪಕರು : ಸದಸ್ಯರು
16. ಪ್ರೊ. ಶಿವಶಂಕರ್ ಕೆ., ಕುಲಸಚಿವರು (ಪರೀಕ್ಷಾಂಗ). : ಸದಸ್ಯರು
17. ಶ್ರೀಮತಿ ಸರೋಜ ಬಿ.ಬಿ., ಕುಲಸಚಿವರು. : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 8ಕ್ಕಿಂತ ಹೆಚ್ಚು ಅಂದರೆ 17 ಜನ ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಮಾನ್ಯ ಕುಲಪತಿಗಳು ಹೊಸದಾಗಿ ಸಿಂಡಿಕೇಟ್‌ಗೆ ನಾಮನಿರ್ದೇಶನಗೊಂಡ ಸದಸ್ಯರಿಗೆ ಅಭಿನಂದಿಸಿ ಸ್ವಾಗತಿಸಿದರು ಮತ್ತು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ನಂತರ ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(11/22) |

-ಃಟಿಪ್ಪಣಿಃ-

**ವಿಷಯಃ** ದಿನಾಂಕ:10.08.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.

*****

ದಿನಾಂಕ:10.08.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಬಂದಿರುವುದಿಲ್ಲ. ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

## ನಿರ್ಣಯ

ದಿನಾಂಕ:10.08.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳನ್ನು ದೃಢೀಕರಿಸಿ ಸಭೆಯು ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(b)/(11/22) |

## –:ಟಿಪ್ಪಣಿ:–

**ವಿಷಯ:** ದಿನಾಂಕ:02.09.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭಾ ನಡಾವಳಿಗಳ ದೃಢೀಕರಣ.

*****

ದಿನಾಂಕ:02.09.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭಾ ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಗಳು ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಬಂದಿರುವುದಿಲ್ಲ. ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

## ನಿರ್ಣಯ

ದಿನಾಂಕ:02.09.2022 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ವಿಶೇಷ ಸಭಾ ನಡಾವಳಿಗಳನ್ನು ದೃಢೀಕರಿಸಿ ಸಭೆಯು ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(c)/(11/22) |

–ಃ<u>ಟಿಪ್ಪಣಿ</u>ಃ–

**ವಿಷಯಃ** ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:07.10.2022 ರಂದು ಜರುಗಿದ **ಕಲಾ, ವಿಜ್ಞಾನ, ವಾಣಿಜ್ಯ, ಶಿಕ್ಷಣ** ನಿಕಾಯಗಳ ನಡಾವಳಿಗಳ ದೃಢೀಕರಣ.

*****

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ–2020ರ 3 ಮತ್ತು 4ನೇ ಸೆಮಿಸ್ಟರ್‌ಗಳ ಪಠ್ಯಕ್ರಮಗಳನ್ನು ಉನ್ನತ ಶಿಕ್ಷಣ ಪರಿಷತ್ತಿನವರು ಅಂತರ್ಜಾಲದಲ್ಲಿ ಪ್ರಕಟಿಸಿರುವ ಪಠ್ಯಕ್ರಮಗಳನ್ನು ವಿವಿಧ ವಿಭಾಗಗಳ ಅಧ್ಯಯನ ಮಂಡಳಿಗಳ ಅಧ್ಯಕ್ಷರುಗಳಿಗೆ ಪಠ್ಯಕ್ರಮಗಳನ್ನು ಪರಿಶೀಲಿಸಿ ಸಲ್ಲಿಸುವಂತೆ ತಿಳಿಸಲಾಗಿತ್ತು. ಸಿದ್ದಪಡಿಸಲಾದ ಎಲ್ಲಾ ನಿಕಾಯಗಳ (**ಕಲಾ, ವಿಜ್ಞಾನ, ವಾಣಿಜ್ಯ, ಶಿಕ್ಷಣ**) ಪಠ್ಯಕ್ರಮಗಳನ್ನು ದಿನಾಂಕ:07.10.2022ರ ನಿಕಾಯಗಳ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ನಡಾವಳಿಗಳನ್ನು ದಿನಾಂಕ:13.10.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಈಗ ಸದರಿ ನಡಾವಳಿಗಳನ್ನು **ದಿನಾಂಕ:14.11.2022**ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

<u>ನಿರ್ಣಯ</u>

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:07.10.2022ರಂದು **ಕಲಾ, ವಿಜ್ಞಾನ, ವಾಣಿಜ್ಯ, ಶಿಕ್ಷಣ** ನಿಕಾಯಗಳ ನಡಾವಳಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.01(f)/(11/22) |

–ಃಟಿಪ್ಪಣಿಃ–

**ವಿಷಯಃ** ವಿಶ್ವವಿದ್ಯಾನಿಲಯದಲ್ಲಿ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸ್ಥಾಪನೆ ಕುರಿತು.

*****

ವಿಶ್ವವಿದ್ಯಾನಿಲಯದಲ್ಲಿ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಸಲುವಾಗಿ **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.01(g)/(11/22) |

-ಃಟಿಪ್ಪಣಿಃ-

**ವಿಷಯಃ** ವಿಶ್ವವಿದ್ಯಾನಿಲಯದಲ್ಲಿ ಶ್ರೀ ತರಳಬಾಳು ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸ್ಥಾಪನೆ ಕುರಿತು.

*****

ವಿಶ್ವವಿದ್ಯಾನಿಲಯದಲ್ಲಿ ಶ್ರೀ ತರಳಬಾಳು ರವರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಸಲುವಾಗಿ **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ ಶ್ರೀ ತರಳಬಾಳು ರವರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾಸನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(a)/(11/22) |

## –:ಟಿಪ್ಪಣಿ:–

**ವಿಷಯ: ಕರ್ನಾಟಕ ನಾಗರೀಕ ಸೇವಾ ನಿಯಮ 247 (ಎ) ರನ್ವಯ ಪಿಂಚಣಿ ಉದ್ದೇಶಕ್ಕಾಗಿ ಎರಡು ವರ್ಷಗಳ ಸೇವೆಯನ್ನು ಅರ್ಹತಾದಾಯಕ ಸೇವೆಯಂದು ಪರಿಗಣಿಸುವ ಬಗ್ಗೆ.**

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಆಇ/4/ಎಸ್‌ಆರ್‌ಎ/2016, ಬೆಂಗಳೂರು, ದಿನಾಂಕ: 10.04.2017

2. ಸರ್ಕಾರಿ ಆದೇಶ ಸಂಖ್ಯೆ: ಆಇ/9/ಸನಿತಿ/2018, ದಿನಾಂಕ: 05.11.2018
3. ಸರ್ಕಾರಿ ಸುತ್ತೋಲೆ ಸಂಖ್ಯೆ: ಆಇ/2/ಸನಿತಿ/2018, ದಿನಾಂಕ: 27.05.2019

*********

ಸರ್ಕಾರದ ಉಲ್ಲೇಖಿತ (1)ರ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ ನಿಯಮ 247(ಎ)ನ್ನು ಮಾರ್ಪಡಿಸಲಾಗಿದ್ದು ದಿನಗೂಲಿ/ಮಿತವೇತನ ಪದವೀಧರರಾಗಿ ಕಾರ್ಯನಿರ್ವಹಿಸಿ ತದನಂತರ ಸರ್ಕಾರಿ ಸೇವೆಯಲ್ಲಿ ಸಕ್ರಮಗೊಂಡ ಸರ್ಕಾರಿ ನೌಕರರಿಗೆ ಪಿಂಚಣಿ ಉದ್ದೇಶಕ್ಕಾಗಿ ಗರಿಷ್ಠ 2 ವರ್ಷಗಳ ಅಧಿಕ ಅರ್ಹತಾದಾಯಕ ಸೇವೆಯನ್ನು ಪರಿಗಣಿಸಲು ಆದೇಶಿಸಲಾಗಿದೆ.

ಮುಂದುವರೆದು ಉಲ್ಲೇಖ (2)ರ ಸರ್ಕಾರಿ ಆದೇಶದಲ್ಲಿ ಆಯಾ ಇಲಾಖೆಯ ಮುಖ್ಯಸ್ಥರಿಗೆ ಸೂಕ್ತ ಆದೇಶ ಹೊರಡಿಸಲು ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ತತ್ಸಂಬಂಧ ಉಲ್ಲೇಖ (3)ರಲ್ಲಿ ಅರ್ಹತಾದಾಯಕ ಸೇವೆಯ ಗರಿಷ್ಟ ಅವಧಿಯನ್ನು 02 ವರ್ಷಗಳಿಗೆ ಜಾರಿಗೊಳಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ ಸೆಕ್ಷನ್ 15 ಮತ್ತು 29 ರನ್ವಯ ವಿಶ್ವವಿದ್ಯಾನಿಲಯದ ಈ ಕೆಳಕಂಡ ಬೋಧಕ ನೌಕರರು 30 ವರ್ಷಗಳ ವಯೋಮಿತಿಯ ನಂತರ ನೇಮಕಾತಿ ಹೊಂದಿ ಸಕ್ರಮಗೊಂಡು ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಸದರಿಯವರಿಗೆ, ಕೆ.ಸಿ.ಎಸ್. ನಿಯಮ 247(ಎ)ರನ್ವಯ ಪಿಂಚಣಿ ಉದ್ದೇಶಕ್ಕಾಗಿ ಗರಿಷ್ಠ 2 ವರ್ಷಗಳ ಅಧಿಕ ಅರ್ಹತಾದಾಯಕ ಸೇವೆಯನ್ನು ಪರಿಗಣಿಸಿ ಸೇವಾ ಸೌಲಭ್ಯವನ್ನು ವಿಸ್ತರಿಸಿ ಆರ್ಥಿಕ ಸೌಲಭ್ಯವನ್ನು ಮಂಜೂರು ಮಾಡುವ ಕುರಿತು **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ.ಸಂ | ಹೆಸರು | ಹುದ್ದೆ | ವಿಭಾಗ | ಸೇವೆಗೆ ಸೇರಿದ ದಿನಾಂಕ | ನಿವೃತ್ತಿ ದಿನಾಂಕ |
|---|---|---|---|---|---|
| 01 | ಪ್ರೊ|| ಗೋಪಾಲ್ ಎಂ. ಅಡ್ವಿರಾವ್ | ಪ್ರಾಧ್ಯಾಪಕರು | ಸ್ನಾತಕೋತ್ತರ ಜೀವರಸಾಯನಶಾಸ್ತ್ರ ವಿಭಾಗ | 16.08.1996 | 31.10.2022 |

## ನಿರ್ಣಯ

ಪ್ರೊ|| ಗೋಪಾಲ್ ಎಂ. ಅಡ್ವಿರಾವ್, ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ – ಇವರು 30 ವರ್ಷಗಳ ವಯೋಮಿತಿ ನಂತರ ನೇಮಕಾತಿ ಹೊಂದಿದ್ದರಿಂದ ಕೆ.ಸಿ.ಎಸ್. ನಿಯಮ 247(ಎ)ರನ್ವಯ ಪಿಂಚಣಿ ಉದ್ದೇಶಕ್ಕಾಗಿ ಗರಿಷ್ಠ 2 ವರ್ಷಗಳ ಅಧಿಕ ಅರ್ಹತಾದಾಯಕ ಸೇವೆಯನ್ನು ಪರಿಗಣಿಸಿ ಸೇವಾ ಸೌಲಭ್ಯವನ್ನು ವಿಸ್ತರಿಸಿ ಆರ್ಥಿಕ ಸೌಲಭ್ಯವನ್ನು ಮಂಜೂರು ಮಾಡಲು ಸಭೆಯು ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾಸನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(b)/(11/22) |

## –ಃಟಿಪ್ಪಣಿಃ–

ವಿಷಯಃ **ವಿಶ್ವವಿದ್ಯಾನಿಲಯದಲ್ಲಿನ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ಸೆಕ್ಷನ್ 34 (7) ರನ್ವಯ ಅಧ್ಯಕ್ಷರುಗಳನ್ನು ನೇಮಕ ಮಾಡುವ ಬಗ್ಗೆ.**

ಉಲ್ಲೇಖಃ
1. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆಃ ದಾವಿವಿ/ಮಾಸನಿ/331/ 2021–22/1192, ದಿನಾಂಕಃ 03.08.2021
2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆಃ ದಾವಿವಿ/ಮಾಸನಿ/331/ 2021–22/5341, ದಿನಾಂಕಃ 18.01.2022
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕಃ 07.10.2022

*********

ವಿಶ್ವವಿದ್ಯಾನಿಲಯದ ಉಲ್ಲೇಖ (1)ರ ಅಧಿಸೂಚನೆಯಲ್ಲಿ ಡಾ. ವೆಂಕಟರಾವ್ ಮಾರುತಿರಾವ್ ಪಲಾಟೆ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ, ದಾವಿವಿ ಇವರನ್ನು ದಿನಾಂಕಃ03.10.2020 ರಿಂದ 02.10.2022ರವರೆಗೆ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು.

ಉಲ್ಲೇಖ (2)ರ ಅಧಿಸೂಚನೆಯಲ್ಲಿ ಪ್ರೊ. ಗೋಪಾಲ್ ಎಂ. ಅಡ್ವಿರಾವ್, ಪ್ರಾಧ್ಯಾಪಕರು, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ದಾವಿವಿ ಇವರನ್ನು ದಿನಾಂಕಃ18.01.2022ರಿಂದ ಮುಂದಿನ ಆದೇಶದವರೆಗೆ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು.

ಮುಂದುವರೆದು ಡಾ. ವೆಂಕಟರಾವ್ ಮಾರುತಿರಾವ್ ಪಲಾಟೆ, ಇವರ ಅಧ್ಯಕ್ಷರ ಅವಧಿಯು ಮುಕ್ತಾಯಗೊಂಡಿರುವುದರಿಂದ ಮತ್ತೊಂದು ಅವಧಿಗೆ ಸದರಿಯವರನ್ನು ವಿಸ್ತರಿಸಲಾಗಿರುವ ಬಗ್ಗೆ ಹಾಗೂ ಪ್ರೊ॥ ಗೋಪಾಲ್ ಎಂ. ಅಡ್ವಿರಾವ್ ಇವರು ದಿನಾಂಕಃ31.10.2022ರಂದು ವಯೋನಿವೃತ್ತಿ ಹೊಂದುತ್ತಿರುವುದರಿಂದ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ವಿಭಾಗದ ಜೇಷ್ಠತಾ ಪಟ್ಟಿಯನುಸಾರ ಪ್ರೊ॥ ವಿ. ಕುಮಾರ್, ಪ್ರಾಧ್ಯಾಪಕರು ಇವರನ್ನು ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವ ಬಗ್ಗೆ **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಸ್ಥಿರೀಕರಣಕ್ಕಾಗಿ ಸಲ್ಲಿಸಿದೆ.

## ನಿರ್ಣಯ

ಡಾ. ವೆಂಕಟರಾವ್ ಮಾರುತಿರಾವ್ ಪಲಾಟೆ, ಪ್ರಾಧ್ಯಾಪಕರು, ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗ – ಇವರನ್ನು ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಮತ್ತೊಂದು ಅವಧಿಗೆ ಮುಂದುವರೆಸಿರುವುದನ್ನು ಹಾಗೂ ಪ್ರೊ॥ ವಿ. ಕುಮಾರ್, ಪ್ರಾಧ್ಯಾಪಕರು ಸ್ನಾತಕೋತ್ತರ ಜೀವರಸಾಯನಶಾಸ್ತ್ರ ವಿಭಾಗ – ಇವರನ್ನು ಸ್ನಾತಕೋತ್ತರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಭೆಯ ಸ್ಥಿರೀಕರಿಸಿತು.

ಕುಲಸಚಿವರು

ಕುಲಪತಿಗಳು

| ಮಾಸನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(c)/(11/22) |

–ಃಟಿಪ್ಪಣಿಃ–

**ವಿಷಯಃ ಡಾ॥ ಚೇತನಾ ಎಂ. ಹೆಚ್ – ಇವರನ್ನು ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದಲ್ಲಿ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಯನ್ನಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ಸೆಕ್ಷನ್ 58 ರನ್ವಯ ಒಂದು ವರ್ಷದ ಅವಧಿಗೆ ನೇಮಿಸುವ ಬಗ್ಗೆ.**

*********

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಈಗ ಕಾರ್ಯನಿರ್ವಹಿಸುತ್ತಿರುವ ಅರೆಕಾಲಿಕ ವೈದ್ಯಾಧಿಕಾರಿಗಳಾದ ಡಾ. ಜೆ.ಡಿ ರಾಘವನ್ ಇವರು 2009 ರಿಂದ ಕುವೆಂಪು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರವಾಗಿದ್ದ ಶಿವಗಂಗೋತ್ರಿ, ದಾವಣಗೆರೆ ಇರುವಾಗಿನಿಂದಲೂ ದಾವಣಗೆರೆ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬಂದ ನಂತರದಿಂದ ಈವರೆಗೂ ಸದರಿಯವರನ್ನು ಅರೆಕಾಲಿಕ ವೈದ್ಯಾಧಿಕಾರಿಗಳನ್ನಾಗಿ ಆರು ತಿಂಗಳವರೆಗೆ ಅಥವಾ ಮುಂದಿನ ಆದೇಶದವರೆಗೆ ಎಂದು ನೇಮಕ ಮಾಡಲಾಗುತ್ತಿದೆ.

ಈಗ ದಾವಣಗೆರೆ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯಾಧಿಕಾರಿಗಳ ಅವಶ್ಯಕತೆ ಇದ್ದು ದಾವಣಗೆರೆ ಆವರಣದಲ್ಲಿ ಮಹಿಳಾ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಇರುವುದರಿಂದ ಹಾಗೂ ಒಟ್ಟು 1393 ವಿದ್ಯಾರ್ಥಿನಿಯರು ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವುದರಿಂದ ಹಾಗೂ ಅದ್ಯಾಪಕ/ಅದ್ಯಾಪಕೇತರ ಒಟ್ಟು 39 ಮಹಿಳಾ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ಒಬ್ಬ ಮಹಿಳಾ ಅರೆಕಾಲಿಕ ವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳಲು ಡಾ.ಜಿ.ಡಿ ರಾಘವನ್ ಇವರು ತಿಳಿಸಿರುವ ಹಿನ್ನೆಲೆಯಲ್ಲಿ ಹಾಗೂ ಮಹಿಳಾ ವೈದ್ಯಾಧಿಕಾರಿಗಳನ್ನು ನೇಮಿಸಿದಲ್ಲಿ ವಿದ್ಯಾರ್ಥಿನಿಯರಿಗೆ ಹಾಗೂ ಮಹಿಳಾ ಸಿಬ್ಬಂದಿಗಳಿಗೆ ಅನುಕೂಲವಾಗುವುದರಿಂದ ಅರೆಕಾಲಿಕ ವೈದ್ಯಾಧಿಕಾರಿಯನ್ನಾಗಿ ಡಾ. ಚೇತನಾ ಎಂ. ಎಚ್., ಬಿ.ಎ.ಎಂ.ಎಸ್., ಡಿ.ಆರ್.ಸಿ.ಎಚ್ ಪದವಿಯನ್ನು ಪಡೆದು ಶ್ರೀಮತಿ ಡಾ.ಶಾರದಾಶೆಟ್ಟಿ ಇವರ ಆಸ್ಪತ್ರೆಯಲ್ಲಿ 05 ವರ್ಷಗಳ ಅನುಭವವನ್ನು ಹೊಂದಿರುವ ಹಿನ್ನೆಲೆಯಲ್ಲಿ ಇವರನ್ನು ಮಹಿಳಾ ಅರೆಕಾಲಿಕ ವೈದ್ಯಾಧಿಕಾರಿಗಳನ್ನಾಗಿ ಈ ಕೆಳಗಿನಂತೆ ನೇಮಕ ಮಾಡುವ ಕುರಿತು **ದಿನಾಂಕ:14.11.2022**ರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಹಾಗೂ ಅನುಮತಿಗಾಗಿ ಕೋರಿದೆ.

| ಕ್ರ.ಸಂ | ಹೆಸರು | ಹುದ್ದೆ | ವೇತನ |
|---|---|---|---|
| 01 | ಡಾ. ಚೇತನಾ ಎಂ.ಎಚ್ | ಮಹಿಳಾ ವೈದ್ಯಾಧಿಕಾರಿಗಳು | |

ನಿರ್ಣಯ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ಸೆಕ್ಷನ್ 58 ರನ್ವಯ ವಿಶ್ವವಿದ್ಯಾನಿಲಯದ ಆರೋಗ್ಯ ಕೇಂದ್ರದಲ್ಲಿ ಅರೆಕಾಲಿಕ ಮಹಿಳಾ ವೈದ್ಯಾಧಿಕಾರಿಯನ್ನಾಗಿ 11 ತಿಂಗಳ ಅವಧಿಗೆ ನೇಮಕ ಮಾಡಲು ವಿಶ್ವವಿದ್ಯಾನಿಲಯದಿಂದ ಅಧಿಸೂಚನೆಯನ್ನು ಹೊರಡಿಸಿ MBBS/BAMS ವಿದ್ಯಾರ್ಹತೆ ಹೊಂದಿರುವವರನ್ನು ನೇಮಕ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬಹುದೆಂದು ಸಭೆಯು ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾಸನಿ ವಿಭಾಗ | |
| --- | --- |
| ವಿಷಯ ಸಂಖ್ಯೆ: | ಸಿಂ.02(d)/(11/22) |

## -:ಟಿಪ್ಪಣಿ:-

ವಿಷಯಃ ವಿಶ್ವವಿದ್ಯಾನಿಲಯದ ಬೋಧಕರು/ಬೋಧಕೇತರರಿಗೆ ಸರ್ಕಾರದ ನಿಯಮಗಳನುಸಾರ ಅನ್ವಯವಾಗುವ ಸೇವಾ ಸೌಲಭ್ಯಗಳನ್ನು ವಿಸ್ತರಿಸುವ ಸಂಬಂಧ ಕೆ.ಸಿ.ಎಸ್.ಆರ್ ನಿಯಮಗಳನ್ನು ವಿಶ್ವವಿದ್ಯಾನಿಲಯದಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳುವ ಬಗ್ಗೆ.

*****

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ಬೋಧಕರು/ಬೋಧಕೇತರರಿಗೆ ಸೇವಾ ಸೌಲಭ್ಯಗಳನ್ನು ವಿಸ್ತರಿಸುವ ಸಂಬಂಧ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ಸೆಕ್ಷನ್ 29 ಮತ್ತು 40 (2) (o) ಮತ್ತು (3) ರನ್ವಯ ಕೆ.ಸಿ.ಎಸ್.ಆರ್ ಕರಡು ಪರಿನಿಯಮಗಳನ್ನು ರಚಿಸಿಕೊಂಡಿದ್ದು, ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ವಿವಿಧ ಸಭೆಗಳ ಅನುಮೋದನೆಯೊಂದಿಗೆ ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

2. ಸರ್ಕಾರವು ಸದರಿ ಪರಿನಿಯಮಗಳಿಗೆ ಸಂಬಂಧಿಸಿದಂತೆ ಕೆಲವು ತಿದ್ದುಪಡಿಗಳನ್ನು ಸೂಚಿಸಿ ಅವುಗಳನ್ನು ಪುನಃ ಪ್ರಾಧಿಕಾರಗಳ ಅನುಮೋದನೆ ಪಡೆದು ಸಲ್ಲಿಸುವಂತೆ ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿಸಿರುತ್ತದೆ.
3. ಆದ್ದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ಸೆಕ್ಷನ್ 29 ಮತ್ತು 40 (2) (o) ಮತ್ತು (3) ರನ್ವಯ ಕೆಲವು ತಿದ್ದುಪಡಿಗಳು ಹಾಗೂ ಮಾರ್ಪಾಡುಗಳೊಂದಿಗೆ ಕೆ.ಸಿ.ಎಸ್.ಆರ್ ನಿಯಮಗಳನ್ನು ವಿಶ್ವವಿದ್ಯಾನಿಲಯದಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಕರಡು ಪರಿನಿಯಮಗಳನ್ನು ಸಿದ್ಧಪಡಿಸಲಾಗಿದೆ. ಸದರಿ ಪರಿನಿಯಮಗಳಿಗೆ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಪುನಃ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.
4. ಸದರಿ ಪರಿನಿಯಮವನ್ನು ದಿನಾಂಕ:13.10.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಸದರಿ ಪರಿನಿಯಮಗಳನ್ನು **ದಿನಾಂಕ:14.11.2022**ರ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### ನಿರ್ಣಯ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ-2000 ಸೆಕ್ಷನ್ 29 ಮತ್ತು 40 (2) (o) ಮತ್ತು (3) ರನ್ವಯ ರಚಿಸಿಕೊಂಡಿರುವ ವಿಶ್ವವಿದ್ಯಾನಿಲಯದ ಕೆ.ಸಿ.ಎಸ್.ಆರ್ ಕರಡು ಪರಿನಿಯಮಗಳನ್ನು ಪರಿಶೀಲಿಸಿ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾಸನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(e)/(11/22) |

## –ಃಟಿಪ್ಪಣಿಃ–

**ವಿಷಯ : ವಿಶ್ವವಿದ್ಯಾನಿಲಯದ ಖಾಯಂ ಬೋಧಕ / ಬೋಧಕೇತರರಿಗೆ ವೈದ್ಯಕೀಯ ವೆಚ್ಚಗಳನ್ನು ಸರ್ಕಾರದ ಅಥವಾ ಖಾಸಗಿ ಸಂಸ್ಥೆಗಳ ಮೂಲಕ ಪಾವತಿಸುವ ಬಗ್ಗೆ.**

**ಉಲ್ಲೇಖ :** ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕಃ 03.11.2022

**********

ನಮ್ಮ ವಿಶ್ವವಿದ್ಯಾನಿಲಯವು ದಿನಾಂಕ: 18.08.2009 ರಿಂದ ಕಾರ್ಯ ನಿರ್ವಹಿಸುತ್ತಿದ್ದು, ಅವಿರತ ಪ್ರಯತ್ನದನುಸಾರ 2016–17 ರಲ್ಲಿ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯು ಹೊಸದಾಗಿ ಬೋಧಕ / ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಿರುತ್ತದೆ. ತದನಂತರ 2018–19 ಮತ್ತು 2019–20 ರಲ್ಲಿ ಒಟ್ಟು 125 ಬೋಧಕರು ವಿಶ್ವವಿದ್ಯಾನಿಲಯದಲ್ಲಿ ನೇಮಕಗೊಂಡಿದ್ದಾರೆ.

ಇತ್ತೀಚಿನ ವರ್ಷಗಳಲ್ಲಿ ವಿಶ್ವವಿದ್ಯಾನಿಲಯದ ಬೋಧಕ / ಬೋಧಕೇತರ ಹಾಗೂ ಅವರ ಅವಲಂಬಿತರ ಆರೋಗ್ಯೋಪಚಾರ ಮತ್ತು ಚಿಕಿತ್ಸೆ ವೆಚ್ಚಗಳ ಮರುಭರಿಕೆ (Reimbursement) ಸಂಬಂಧ ಪ್ರತಿ ವರ್ಷವೂ ಕನಿಷ್ಠ ರೂ. 30.00 ಲಕ್ಷಕ್ಕೂ ಅಧಿಕ ವೈದ್ಯಕೀಯ ಮರುಭರಿಕೆ ವೆಚ್ಚಗಳನ್ನು ಪಾವತಿಸಲಾಗುತ್ತಿದೆ. ಇನ್ನು ಮುಂದೆ ಈ ರೀತಿಯ ವೆಚ್ಚಗಳು ಇನ್ನು ಅಧಿಕಗೊಳ್ಳುವ ಸಾಧ್ಯತೆಗಳನ್ನು ತಳ್ಳಿ ಹಾಕುವಂತಿಲ್ಲ.

ಪ್ರತಿ ವರ್ಷವು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲಗಳು ಬಹಳ ಕ್ಷೀಣಿಸುತ್ತಲಿದೆ. ಸರ್ಕಾರದ ವತಿಯಿಂದ ಖಾಯಂ/ಬೋಧಕ/ಬೋಧಕೇತರ ಹಾಗೂ ಅಧಿಕಾರಿಗಳ ವೇತನಾನುದಾನ ಹೊರತು ಪಡಿಸಿದರೆ, ಯಾವುದೇ ರೀತಿಯ ಬೇರೆ ಬೇರೆ ವೆಚ್ಚಗಳಿಗೆ ಅನುದಾನ ಲಭ್ಯವಿರುವುದಿಲ್ಲವೆಂಬುದನ್ನು ಸಭೆಯ ಅವಗಾಹನೆಗೆ ಸಲ್ಲಿಸಿದೆ.

ಸರ್ಕಾರದಲ್ಲಿ ಎಲ್ಲಾ ಹಂತದ ನೌಕರರಿಗೆ "ಆರೋಗ್ಯ ಸಂಜೀವಿನಿ" ಯೋಜನೆ ಮೂಲಕ – "ನಗದು ರಹಿತ" ಆರೋಗ್ಯ ಚಿಕಿತ್ಸಾ ಸೌಲಭ್ಯಗಳನ್ನು ಸರ್ಕಾರವು ಜಾರಿಗೊಳಿಸಿದೆ. ಆದರೆ ಸರ್ಕಾರದ ಸ್ವಾಯತ್ತ ಸಂಸ್ಥೆಯಾದ ವಿಶ್ವವಿದ್ಯಾನಿಲಯದ ನೌಕರರಿಗೆ ಈ ರೀತಿಯ ಸೌಲಭ್ಯಗಳನ್ನು ವಿಸ್ತರಿಸಿರುವುದಿಲ್ಲ.

ಆದುದರಿಂದ ಪ್ರಸ್ತುತ ಮಾರುಕಟ್ಟೆ ವ್ಯಾಪ್ತಿಯಲ್ಲಿ ಹಲವಾರು ವಿಮಾ ಸಂಸ್ಥೆಗಳು "ನಗದು ರಹಿತ" ಆರೋಗ್ಯ ವೆಚ್ಚಗಳನ್ನು ಭರಿಸುತ್ತಿದ್ದು ಈ ಸಂಬಂಧ ವಿವಿಧ ರೀತಿಯ ಯೋಜನೆಗಳನ್ನು ಜಾರಿಗೊಳಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಕೇಂದ್ರ/ರಾಜ್ಯ ಸಕಾರದ ಅಧೀನ ಸಂಸ್ಥೆಗಳ ಮೂಲಕ ಚಾಲ್ತಿಯಲ್ಲಿರುವ 'ಆರೋಗ್ಯ ವಿಮಾ' ಸಂಸ್ಥೆಗಳ ಯೋಜನೆಗಳನ್ನು ವಿಶ್ವವಿದ್ಯಾನಿಲಯದ ಖಾಯಂ ಬೋಧಕ/ಬೋಧಕೇತರರಿಗೆ ಮತ್ತು ಅಧಿಕಾರಿಗಳಿಗೆ ವಿಸ್ತರಿಸುವ ಬಗ್ಗೆ ಪರೀಶಿಲಿಸಬಹುದಾಗಿದ್ದು, ತತ್ಸಂಬಂಧ ವಿವಿಧ ಸಂಸ್ಥೆಗಳಿಂದ ದರಪಟ್ಟಿಗಳ ಪಟ್ಟಿ ಪಡೆದುಕೊಂಡು ವಿಶ್ವವಿದ್ಯಾನಿಲಯದ ನೌಕರರಿಗೆ ಅವಶ್ಯವಿರುವ ನಗದು ರಹಿತ ವೈದ್ಯಕೀಯ ಸೌಲಭ್ಯಗಳ ಬಗ್ಗೆ ವಾರ್ಷಿಕ(ಪ್ರೀಮಿಯಂ) ವಂತಿಕೆಯ ಬಗ್ಗೆ ಪರಿಶೀಲಿಸಿಕೊಂಡು ಸರ್ಕಾರದಿಂದ ವಿಶೇಷ ಅನುದಾನ ಪಡೆಯುವ ಬಗ್ಗೆ ಕ್ರಮಕೈಗೊಳ್ಳಬಹುದಾಗಿದೆ. ತತ್ಸಂಬಂಧ ಸರ್ಕಾರದಿಂದ ಮಾಹಿತಿ ಬಂದ ನಂತರ ಮುಂದಿನ ಕ್ರಮ ಕೈಗೊಳ್ಳಬಹುದಾಗಿದೆ.

ಮೇಲ್ಕಂಡ ಸವಿವರ ಮಾಹಿತಿಯನ್ನು **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ, ಪರಿಶೀಲನೆಗೆ ಮತ್ತು ನಿರ್ಣಯಕ್ಕಾಗಿ ಸಲ್ಲಿಸಿದೆ.

### ನಿರ್ಣಯ

ವಿಶ್ವವಿದ್ಯಾನಿಲಯದ ಖಾಯಂ ಬೋಧಕ/ಬೋಧಕೇತರರಿಗೆ ವೈದ್ಯಕೀಯ ವೆಚ್ಚಗಳನ್ನು ಸರ್ಕಾರದ ಅಥವಾ ಖಾಸಗಿ ಸಂಸ್ಥೆಗಳ ಮೂಲಕ ಪಾವತಿಸುವ ಸಂಬಂಧ ಸರ್ಕಾರಕ್ಕೆ ಪತ್ರಿಸಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಮಾಸನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(f)/(11/22) |

**–:ಟಿಪ್ಪಣಿ:–**

ವಿಷಯ : ವಿಶ್ವವಿದ್ಯಾನಿಲಯದಲ್ಲಿ ನೇಮಕಗೊಂಡಿರುವ ಖಾಯಂ ಬೋಧಕ/ಬೋಧಕೇತರರಿಗೆ ಎನ್.ಪಿ.ಎಸ್. ಪಿಂಚಣಿ ಯೋಜನೆ ನಿಯಮಗಳನುಸಾರ ಉದ್ಯೋಗದಾತರ ಪಿಂಚಣಿ ವಂತಿಗೆಯನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ಮಾನ್ಯ ಕುಲಪತಿಗಳ ನಿರ್ದೇಶನ ದಿನಾಂಕ: 03.11.2022

********

ವಿಶ್ವವಿದ್ಯಾನಿಲಯವು ದಿನಾಂಕ:18.08.2009ರಂದು ಸ್ಥಾಪನೆಯಾದ ನಂತರ ಪ್ರಥಮ ಹಂತದ ಬೋಧಕರ ನೇರ ನೇಮಕಾತಿ ಪ್ರಕ್ರಿಯೆಗಳನ್ನು 2018–19ನೇ ಸಾಲಿನಲ್ಲಿ ಪ್ರಾರಂಭಿಸಲಾಗಿದೆ. ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪತ್ರ ದಿನಾಂಕ:24.01.2017ರನ್ವಯ ಒಟ್ಟು 125 ಬೋಧಕರ ಹುದ್ದೆಗಳನ್ನು ಹೊಸದಾಗಿ ಸೃಜಿಸಲಾದ ಹಿನ್ನೆಲೆಯಲ್ಲಿ 2018–19 ಮತ್ತು 2019–20ನೇ ಸಾಲಿನಲ್ಲಿ ಪ್ರಥಮ ಹಂತದ ನೇಮಕಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗಿದೆ.

ಸರ್ಕಾರದ ಹೊಸ ನಿವೃತ್ತಿ ವೇತನ ಯೋಜನೆಯನುಸಾರ ದಿನಾಂಕ:01.04.2006ರ ನಂತರ ನೇಮಕಗೊಂಡಿರುವ ಎಲ್ಲಾ ನೌಕರರಿಗೆ ಹೊಸ ನಿವೃತ್ತಿ ವೇತನ (New Pension Scheme) ನಿಯಮಗಳನುಸಾರ ಉದ್ಯೋಗಿಗಳ ವತಿಯಿಂದ ಶೇಕಡ 10ರಷ್ಟು ಪಿಂಚಣಿ ವಂತಿಗೆ ಮತ್ತು ಉದ್ಯೋಗದಾತರ ವತಿಯಿಂದ ಶೇಕಡ 14ರಷ್ಟು ಪಿಂಚಣಿ ವಂತಿಗೆಯನ್ನು ಹೊಸ ನಿವೃತ್ತಿ ವೇತನ ಖಾತೆಗೆ ಜಮಾ ಮಾಡಬೇಕಾಗಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ನೇಮಕಗೊಂಡ ಬೋಧಕರ ಮೂಲ ವೇತನದ ಆಧಾರದ ಮೇರೆಗೆ ಪ್ರತಿ ತಿಂಗಳು ಸಂಬಂಧಪಟ್ಟ ಬೋಧಕರ ವೇತನದಿಂದ ಶೇಕಡ 10% ರಷ್ಟು ವಂತಿಗೆಯನ್ನು ಕಟಾಯಿಸಿ ಹೊಸ ಪಿಂಚಣಿ (New Pension Scheme Account) ಖಾತೆಗೆ ಜಮಾ ಮಾಡಲಾಗುತ್ತಿದೆ. ಆದರೆ, ಇದರ ಜೊತೆಯಲ್ಲಿ ಉದ್ಯೋಗದಾತರಾದ ವಿಶ್ವವಿದ್ಯಾನಿಲಯ (ಪರೋಕ್ಷವಾಗಿ ಸರ್ಕಾರ)ದ ವತಿಯಿಂದ ಶೇಕಡ 14ರಷ್ಟು ವಂತಿಗೆಯನ್ನು ನೀಡುತ್ತಿಲ್ಲ. ಉದ್ಯೋಗದಾತರ ವಂತಿಗೆಯನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಲ್ಲಿ ಭರಿಸಲು ಸರ್ಕಾರ ನಿರ್ದೇಶನ ನೀಡಿರುತ್ತಾರೆ.

ಸರ್ಕಾರದ ವತಿಯಿಂದ ವಿಶ್ವವಿದ್ಯಾನಿಲಯದ ಖಾಯಂ ಬೋಧಕ/ಬೋಧಕೇತರ/ ಅಧಿಕಾರಿಗಳ ವೇತನವನ್ನು ಮಾತ್ರ ಹೆಚ್.ಆರ್.ಎಂ.ಎಸ್. ಮೂಲಕ ಪಾವತಿಸಲಾಗುತ್ತಿದೆ. ಇನ್ನುಳಿದ ದೈನಂದಿನ ನಿರ್ವಹಣಾ ವೆಚ್ಚಗಳ/ಮಾಸಿಕ ನಿರ್ವಹಣಾ ವೆಚ್ಚಗಳು/ಕಡ್ಡಾಯ ಪಾವತಿ ವೆಚ್ಚಗಳಾದ ವಿದ್ಯುತ್, ಇಂಧನ, ದೂರವಾಣಿ ವೆಚ್ಚಗಳು ಹಾಗೂ ಇನ್ನಿತರ ವೆಚ್ಚಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಲ್ಲಿ ಭರಿಸಿ ಪಾವತಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡುತ್ತಿರುವ ಎಸ್.ಸಿ/ಎಸ್.ಟಿ. ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ/ಸಂಶೋಧಕರ ಅಭಿವೃದ್ಧಿಗಾಗಿ ಸರ್ಕಾರವು ಬಿಡುಗಡೆ ಮಾಡುತ್ತಿದ್ದ (SCP/TSP) ಅನುದಾನವು ಸಹ ಪ್ರಸ್ತುತದಲ್ಲಿ ಸರ್ಕಾರದಿಂದ ಬಿಡುಗಡೆಯಾಗುತ್ತಿಲ್ಲ.

ವಿಶ್ವವಿದ್ಯಾನಿಲಯದ ನೇರ ಆಡಳಿತ ವ್ಯಾಪ್ತಿಯಲ್ಲಿ ಒಟ್ಟು 06 (ಆರು) ಕ್ಯಾಂಪಸ್ಸುಗಳಿದ್ದು, ವಿದ್ಯುತ್/ನೀರು ಸರಬರಾಜು/ಇಂಧನ/ದೂರವಾಣಿ ವೆಚ್ಚಗಳು/ವಾರ್ಷಿಕ ಹಾಗೂ ಮಾಸಿಕ ನಿರ್ವಹಣಾ ವೆಚ್ಚಗಳನ್ನು ಆಂತರಿಕ ಸಂಪನ್ಮೂಲದಡಿ ಭರಿಸಿ ಪಾವತಿಸಲಾಗುತ್ತಿದೆ. ಅಲ್ಲದೆ, ಬೋಧನೆ ಮತ್ತು ಸಂಶೋಧನೆಗೆ ಅತ್ಯಾವಶ್ಯವಿರುವ ಗ್ರಂಥಾಲಯ ವ್ಯವಸ್ಥೆ, ಬೋಧನಾ ವ್ಯವಸ್ಥೆ, ಪ್ರಯೋಗಾಲಯ ವ್ಯವಸ್ಥೆ, ಲೇಖನ ಸಾಮಗ್ರಿಗಳು, ಉಪಕರಣಗಳ ಖರೀದಿ, ಶುಚಿತ್ವ ವ್ಯವಸ್ಥೆ, ವಿದ್ಯಾರ್ಥಿಗಳ ಹಾಗೂ ವಿದ್ಯಾರ್ಥಿನಿಲಯ

ಕುಲಸಚಿವರು ಕುಲಪತಿಗಳು

ಹಾಸ್ಟಲ್‌ಗಳ ಶುಚಿತ್ವ ಮತ್ತು ನಿರ್ವಹಣಾ ವ್ಯವಸ್ಥೆಗಳ ವೆಚ್ಚಗಳು ಪ್ರತಿ ಹಂತದಲ್ಲಿ ಮತ್ತು ಪ್ರತಿ ತಿಂಗಳು ಏರಿಕೆಯಾಗುತ್ತಿವೆ.

ಇದಲ್ಲದೆ, ವಿಶ್ವವಿದ್ಯಾನಿಲಯದ ದೈನಂದಿನ ಆಡಳಿತ ವ್ಯವಸ್ಥೆಗೆ ಅವಶ್ಯವಿರುವ ಬೋಧಕೇತರ ನೇಮಕಾತಿಗೆ ಸರ್ಕಾರದ ನಿರ್ಬಂಧ ಇರುವುದರಿಂದ ಬೋಧಕೇತರ ಹುದ್ದೆಗಳ ಕಾರ್ಯ ನಿರ್ವಹಣೆಗಾಗಿ ಏಜೆನ್ಸಿ ಮೂಲಕ "ಸಿ" ಮತ್ತು "ಡಿ" ದರ್ಜೆ ನೌಕರರ ಸೇವೆಯನ್ನು ಸರ್ಕಾರದ ನಿರ್ದೇಶಾನುಸಾರ ಪಡೆದುಕೊಳ್ಳಲಾಗಿದೆ. ಸದರಿ "ಸಿ" ಮತ್ತು "ಡಿ" ದರ್ಜೆ ಹೊರಗುತ್ತಿಗೆ ನೌಕರರ ವೇತನ ಹಾಗೂ ಇನ್ನಿತರ ಬಾಬ್ತು ಪಾವತಿಗೆ ಮಾಸಿಕ ರೂ. 65.00 ಲಕ್ಷಗಳ ಅವಶ್ಯವಿದ್ದು, ವಾರ್ಷಿಕ ಅಂದಾಜು ರೂ.8.00 ಕೋಟಿ ಅನುದಾನ ಅವಶ್ಯವಿದೆ.

ಪ್ರತಿ ವರ್ಷವು ವಿಶ್ವವಿದ್ಯಾನಿಲಯದಲ್ಲಿ ಆಂತರಿಕ ಸಂಪನ್ಮೂಲ ಶೇಖರಣೆ ಕ್ಷೀಣಿಸುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಬೋಧನೆ/ಸಂಶೋಧನೆ/ಆಡಳಿತ ವೆಚ್ಚ/ಹಂಗಾಮಿ ಹಾಗೂ ಅತಿಥಿ ಉಪನ್ಯಾಸಕರ ವೇತನ /ಹೊರಗುತ್ತಿಗೆ ನೌಕರರ ವೇತನ/ಪ್ರಯೋಗಾಲಯ ವೆಚ್ಚಗಳು/ಬೋಧನಾ ಹಾಗೂ ಪ್ರಯೋಗಾಲಯ ಸಾಮಾಗ್ರಿ ವಸ್ತುಗಳ ವೆಚ್ಚಗಳು ಹಾಗೂ ಕಡ್ಡಾಯ ವೆಚ್ಚಗಳಾದ ವಿದ್ಯುತ್, ಇಂಧನ, ಮಾಸಿಕ/ವಾರ್ಷಿಕ ನಿರ್ವಹಣೆ/ಸಭಾ ವೆಚ್ಚಗಳಿಗೆ ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲ ಸಾಕಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಹೊಸದಾಗಿ ನೇಮಕಗೊಂಡ ಬೋಧಕರು/ಬೋಧಕೇತರರಿಗೆ ಹೊಸ ಪಿಂಚಣಿ ಯೋಜನೆಯಡಿ ಪಾವತಿಸಬೇಕಾದ ಉದ್ಯೋಗದಾತರ ಭಾಗ ಶೇಕಡ 14ರಷ್ಟು ವಂತಿಗೆಯ ವಾರ್ಷಿಕ ಅಂದಾಜು ರೂ. 3.00 ಕೋಟಿ (ರೂಪಾಯಿ ಮೂರು ಕೋಟಿ) ಮೊತ್ತವನ್ನು ಆರ್ಥಿಕ/ಸಂಪನ್ಮೂಲ ಕೊರತೆಯಿಂದ ಪಾವತಿಸಲು ಸಾಧ್ಯವಾಗುತ್ತಿಲ್ಲವೆಂಬುದನ್ನು ಸಭೆಯ ಅವಗಾಹನೆಗೆ ಸಲ್ಲಿಸಿದೆ.

ಈ ಸಂದರ್ಭದಲ್ಲಿ ಮುಂದುವರೆದು ಸಭೆಯ ಗಮನಕ್ಕೆ ತರುವುದೇನೆಂದರೆ, ವಿಶ್ವವಿದ್ಯಾನಿಲಯವು ಸರ್ಕಾರದ ವತಿಯಿಂದ ಪ್ರಾರಂಭಿಸಲ್ಪಟ್ಟ ಸ್ವಾಯತ್ತ ಸಂಸ್ಥೆಯಾಗಿದ್ದು, ವಿಶ್ವವಿದ್ಯಾನಿಲಯದ ವೇತನ ಸಹಿತ ಎಲ್ಲಾ ವೆಚ್ಚಗಳನ್ನು ಸರ್ಕಾರವೇ ಭರಿಸಬೇಕಾಗಿರುತ್ತದೆ. ಕರ್ನಾಟಕ ಸಿವಿಲ್ ಸೇವಾ ನಿಯಮಗಳು (ಕೆಸಿಎಸ್‌ಆರ್) ನಿಯಮ-235ರನ್ವಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾನಿಲಯಗಳ ಸಂಪೂರ್ಣ ಆರ್ಥಿಕ ಸಂಪನ್ಮೂಲದ ಜವಾಬ್ದಾರಿಯು ರಾಜ್ಯ ಸರ್ಕಾರದ್ದಾಗಿರುತ್ತದೆ ಎಂಬುದನ್ನು ಗಮನಿಸಬಹುದಾಗಿದೆ.

ಈ ಕುರಿತು **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಮತ್ತು ನಿರ್ಣಯಕ್ಕಾಗಿ ಸಲ್ಲಿಸಿದೆ.

## ನಿರ್ಣಯ

ಕರ್ನಾಟಕ ಸಿವಿಲ್ ಸೇವಾ ನಿಯಮಗಳು (ಕೆಸಿಎಸ್‌ಆರ್) ನಿಯಮ-235 ರನ್ವಯ ಸರ್ಕಾರದಿಂದ ಸ್ಥಾಪಿಸಲ್ಪಟ್ಟ ವಿಶ್ವವಿದ್ಯಾನಿಲಯಗಳ ಸಂಪೂರ್ಣ ಆರ್ಥಿಕ ಸಂಪನ್ಮೂಲದ ಜವಾಬ್ದಾರಿಯು ರಾಜ್ಯ ಸರ್ಕಾರದ್ದಾಗಿರುವುದರಿಂದ ವಿಶ್ವವಿದ್ಯಾನಿಲಯದಲ್ಲಿ ನೇಮಕಗೊಂಡಿರುವ ಖಾಯಂ ಬೋಧಕ/ ಬೋಧಕೇತರರಿಗೆ ಎನ್.ಪಿ.ಎಸ್. ಪಿಂಚಣಿ ಯೋಜನೆ ನಿಯಮಗಳನುಸಾರ ಉದ್ಯೋಗದಾತರ ಪಿಂಚಣಿ ವಂತಿಗೆಯನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಪತ್ರ ಬರೆಯುವಂತೆ ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(a)/(11/22) |

## –:ಟಿಪ್ಪಣಿ:–

ವಿಷಯ: **ವಿಶ್ವವಿದ್ಯಾನಿಲಯದಲ್ಲಿ 2023–24 ನೇ ಸಾಲಿನ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಖಾಲಿ ಉತ್ತರ ಪತ್ರಿಕೆಗಳ ಸರಬರಾಜುಗಾಗಿ ಇ–ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸುವ ಬಗ್ಗೆ.**

*****

2023–24ನೇ ಸಾಲಿನಲ್ಲಿ ನಡೆಯುವ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಖಾಲಿ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳಲು ಈ ಹಿಂದೇ ಇ–ಟೆಂಡರ್ನಲ್ಲಿ ಯಶಸ್ವಿಯಾದ ಸಂಸ್ಥೆ ಮೆ:ಮೆಪ್ರರಾ ಕಂಪ್ಯೂಟರ್ ಸಿಸ್ಟಮ್. ಬೆಂಗಳೂರು ಇವರಿಂದ 05 ವರ್ಷಗಳ ಧೀರ್ಘ ಕರಾರು ಒಪ್ಪಂದಕ್ಕೆ ಸಹಿ ಮಾಡಲಾಗಿತ್ತು. ಆದರೆ ಈ ಕುರಿತು ಆಡಿಟ್ ಆಕ್ಷೇಪಣೆಯಾಗಿರುವ ಹಿನ್ನೇಲೆಯಲ್ಲಿ ಸದರಿ ಕರಾರನ್ನು ರದ್ದು ಪಡಿಸಿಕೊಂಡು ಹೊಸದಾಗಿ ಖಾಲಿ ಉತ್ತರ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಿಕೊಳ್ಳುವ ಸಂಬಂಧ ಇ–ಪೋರ್ಟಲ್ನಲ್ಲಿ ಟೆಂಡರ್ ಆಹ್ವಾನಿಸಲು **ದಿನಾಂಕ:14.11.2022**ರ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, ಖಾಲಿ ಉತ್ತರ ಪತ್ರಿಕೆಗಳ ಸರಬರಾಜುಗಾಗಿ ಇ–ಪೋರ್ಟಲ್ನಲ್ಲಿ ಟೆಂಡರ್ ಆಹ್ವಾನಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                                        ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(b)/(11/22) |

-ಃಟಿಪ್ಪಣಿಃ-

**ವಿಷಯಃ** ವಿಶ್ವವಿದ್ಯಾನಿಲಯದಲ್ಲಿ 2022-23 ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, M/S;Logisys, Bangalore ಇವರಿಗೆ ರೂ. 84,66,300/- ಗಳನ್ನು ಮತ್ತು M/S;Unicalre Solutions Pvt Ltd, Bangalore ಇವರಿಗೆ ರೂ. 53,49,354/- ಗಳನ್ನು ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತುಗಳನ್ನು ಒಪ್ಪಂದದ ಪ್ರಕಾರ ಹಣ ಪಾವತಿ ಮಾಡುವ ಬಗ್ಗೆ.

ಉಲ್ಲೇಖ: ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ:10-08-2022

*****

ಉಲ್ಲಖಿತ (1) ರ ಸಿಂಡಿಕೇಟ್ ಸಭೆಯ ನಿರ್ಣಯನುಸಾರ ಪರೀಕ್ಷಾ ತಂತ್ರಾಂಶಕ್ಕೆ ಸಂಬಂಧಿಸಿದಂತೆ, ರೂ.1.00 ಲಕ್ಷಕ್ಕಿಂತ ಮೇಲ್ಪಟ್ಟ ಬಿಲ್ಲುಗಳನ್ನು ಭರಿಸಲು ಸಿಂಡಿಕೇಟ್ ಅನುಮೋದನೆ ನೀಡಿರುವುದರಿಂದ ಸದರಿ ಬಿಲ್ಲನ್ನು ಪಾವತಿಗಾಗಿ ಹಣಕಾಸು ವಿಭಾಗಕ್ಕೆ ಕಳುಹಿಸಲಾಗಿತ್ತು.

ಆದರೆ ಮಾನ್ಯ ಹಣಕಾಸು ಅಧಿಕಾರಿಗಳು ದಾವಣಗೆರೆ ವಿಶ್ವವಿದ್ಯಾನಿಲಯ, ಇವರು ರೂ.1.00 ಲಕ್ಷಕ್ಕಿಂತ ಮೇಲ್ಪಟ್ಟ ಬಿಲ್ಲಿಗೆ ಬದಲಾಗಿ ಪ್ರತ್ಯೇಕವಾಗಿ ಬಿಲ್ಲಿನ ಮೊತ್ತಕ್ಕೆ ಅನುಗುಣವಾಗಿ ಸಿಂಡಿಕೇಟ್ ಅನುಮೋದನೆ ಪಡೆದ ಬಗ್ಗೆ ನಿರ್ಣಯದ ಪ್ರತಿ ನೀಡುವಂತೆ ಮೌಖಿಕವಾಗಿ ತಿಳಿಸಿರುತ್ತಾರೆ. ಆದ್ದರಿಂದ ಪುನಃ ಈ ಕೆಳಕಂಡಂತೆ ಬಿಲ್ಲವಾರು ಮೊತ್ತಕ್ಕೆ ಅನುಮೋದನೆ ನೀಡಲು **ದಿನಾಂಕ:14.11.2022ರ** ಸಿಂಡಿಕೇಟ್ ಸಭೆಗೆ ಮಂಡಿಸಿದೆ.

ಬಿಲ್ಲುಗಳ ವಿವರಗಳು

| ಕ್ರ ಸಂ | ವಿವರಗಳು M/S;Logisys, Bangalore | ಮೊತ್ತ | ಷರಾ |
|---|---|---|---|
| 01 | ಮೊದಲನೇ ಕಂತಿನ ಹಣ (ಶೇಕಡ 30% ರಷ್ಟು) | ರೂ.28,22,100-00 | ಹಣ ಪಾವತಿಸಬೇಕು |
| 02 | ಎರಡನೇ ಕಂತಿನ ಹಣ (ಶೇಕಡ 30% ರಷ್ಟು) | ರೂ.28,22,100-00 | ಹಣ ಪಾವತಿಸಬೇಕು |
| 03 | ಮೂರನೇ ಕಂತಿನ ಹಣ (ಶೇಕಡ 30% ರಷ್ಟು) | ರೂ.28,22,100-00 | ಹಣ ಪಾವತಿಸಬೇಕು |
| | ಒಟ್ಟು ಮೊತ್ತ. | **ರೂ.84,66,300-00** | |
| ಕ್ರ ಸಂ | ವಿವರಗಳು M/S;Unicalre Solutions Pvt Ltd, Bangalore | ಮೊತ್ತ | ಷರಾ |
| 01 | ಮೊದಲನೇ ಕಂತಿನ ಹಣ (ಶೇಕಡ 30% ರಷ್ಟು) | ರೂ.17,83,118-00 | ಹಣ ಪಾವತಿಸಬೇಕು |
| 02 | ಎರಡನೇ ಕಂತಿನ ಹಣ (ಶೇಕಡ 30% ರಷ್ಟು) | ರೂ.17,83,118-00 | ಹಣ ಪಾವತಿಸಬೇಕು |
| | ಮೂರನೇ ಕಂತಿನ ಹಣ (ಶೇಕಡ 30% ರಷ್ಟು) | ರೂ.17,83,118-00 | ಹಣ ಪಾವತಿಸಬೇಕು |
| | ಒಟ್ಟು ಮೊತ್ತ. | **ರೂ.53,49,354-00** | |

ನಿರ್ಣಯ

ವಿಶ್ವವಿದ್ಯಾನಿಲಯದಲ್ಲಿ 2022-23 ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, M/S;Logisys, Bangalore ಇವರಿಗೆ ರೂ.84,66,300/- ಗಳನ್ನು ಮತ್ತು M/S;Unicalre Solutions Pvt Ltd, Bangalore ಇವರಿಗೆ ರೂ.53,49,354/- ಗಳನ್ನು ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಬಾಬ್ತುಗಳನ್ನು ಒಪ್ಪಂದದ ಪ್ರಕಾರ ಹಣ ಪಾವತಿ ಮಾಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(c)/(11/22) |

## –ಃಟಿಪ್ಪಣಿಃ–

**ವಿಷಯಃ** ಸೆಪ್ಟಂಬರ್/ಅಕ್ಟೋಬರ್–2022 ರ ಪದವಿ ಪರೀಕ್ಷೆಗಳಿಗೆ ಲೇಖನ/ಮುದ್ರಿತ ಸಾಮಾಗ್ರಿಗಳನ್ನು ಖರೀದಿಸಿದ ಬಾಬ್ತು ರೂ.8,20,759/– ಗಳನ್ನು ಪಾವತಿಸಲು ಅನುಮೋದನೆ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಸೆಪ್ಟಂಬರ್/ಅಕ್ಟೋಬರ್–2022 ರ ಪದವಿ ಪರೀಕ್ಷೆಗಳಿಗೆ ಲೇಖನ/ಮುದ್ರಿತ ಸಾಮಾಗ್ರಿಗಳನ್ನು ಇ–ಟೆಂಡರ್ ನಲ್ಲಿ ಯಶಸ್ವಿಯಾದ ಮೆ:ಶ್ರೀ ಮಲ್ಲೇಶ್ವರ ಪ್ರಿಂಟರ್ಸ್ & ಎಂಟರ್ ಪ್ರೈಸಸ್ಸ್, ಭದ್ರಾವತಿ. ಇವರಿಂದ ಖರೀದಿಸಲಾಗಿದ್ದು. ಸದರಿ ಬಿಲ್ಲಿನ ಬಾಬ್ತು ರೂ:8,20,759/– (ರೂಪಾಯಿಗಳು ಎಂಟೂ ಲಕ್ಷದ ಇಪ್ಪತ್ತು ಸಾವಿರದ ಏಳೂ ನೂರಾ ಐವತ್ತೊಂಭತ್ತು ಮಾತ್ರ) ಗಳಾಗಿರುತ್ತದೆ. ಆದ್ದರಿಂದ, **ದಿನಾಂಕ:14.11.2022** ರಂದು ನಡೆಯುವ ಸಿಂಡಿಕೇಟ್ ಸಭೆಯ ಅವಗಾಹನೆಗಾಗಿ ಮತ್ತು ಅನುಮೋದನೆಗಾಗಿ ಕೋರಿದೆ.

## ನಿರ್ಣಯ

ಮೆ:ಶ್ರೀ ಮಲ್ಲೇಶ್ವರ ಪ್ರಿಂಟರ್ಸ್ & ಎಂಟರ್ ಪ್ರೈಸಸ್ಸ್, ಭದ್ರಾವತಿ – ಇವರಿಗೆ ಸೆಪ್ಟಂಬರ್/ಅಕ್ಟೋಬರ್–2022 ರ ಪದವಿ ಪರೀಕ್ಷೆಗಳಿಗೆ ಲೇಖನ/ಮುದ್ರಿತ ಸಾಮಾಗ್ರಿಗಳನ್ನು ಖರೀದಿಸಿದ ಬಾಬ್ತು ರೂ.8,20,759/– ಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(d)/(11/22) |

**–ಃಟಿಪ್ಪಣಿಃ–**

**ವಿಷಯಃ** ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವ ನಿಮಿತ್ತ ಪೆಂಡಾಲ್ ಮತ್ತು ಊಟದ ವ್ಯವಸ್ಥೆ ಏರ್ಪಡಿಸುವ ಸಂಬಂಧ ಇ-ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸುವ ಬಗ್ಗೆ.

*****

ಮುಂಬರುವ ದಿನಗಳಲ್ಲಿ ನಡೆಸಲಾಗುವ ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವ ಸಮಾರಂಭಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿಧ್ಯಾರ್ಥಿಗಳು/ಪೋಷಕರು/ಗಣ್ಯವ್ಯಕ್ತಿಗಳು ಪಾಲ್ಗೊಳ್ಳುವುದರಿಂದ ಈ ಕಾರ್ಯಕ್ರಮವನ್ನು ಸುಂದರವಾಗಿ/ ಯಶಸ್ವಿಯಾಗಿ ನಿರ್ವಹಿಸಲು ಆಸನದ ವ್ಯವಸ್ಥೆ ಒಳಗೊಂಡ ಪೆಂಡಾಲ್, ಲೈಟಿಂಗ್, ಸೌಂಡ್ ಸಿಸ್ಟಮ್/ಊಟದ ವ್ಯವಸ್ಥೆಗಾಗಿ ಇ-ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲು **ದಿನಾಂಕ:14.11.2022ರ** ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದೆ.

**ನಿರ್ಣಯ**

ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಆಸನದ ವ್ಯವಸ್ಥೆ ಒಳಗೊಂಡ ಪೆಂಡಾಲ್, ಲೈಟಿಂಗ್, ಸೌಂಡ್ ಸಿಸ್ಟಮ್/ಊಟದ ವ್ಯವಸ್ಥೆಗಾಗಿ ಇ-ಪೋರ್ಟಲ್‌ನಲ್ಲಿ ಟೆಂಡರ್ ಆಹ್ವಾನಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(e)/(11/22) |

–ಃಟಿಪ್ಪಣಿಃ–

**ವಿಷಯಃ ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವ ಸಮಾರಂಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲು ಚಿನ್ನದ ಪದಕ ಖರೀದಿಸುವ ಸಂಬಂಧ ಇ-ಟೆಂಡರ್ ಆಹ್ವಾನಿಸುವ ಬಗ್ಗೆ.**

*****

ಮುಂಬರುವ ದಿನಗಳಲ್ಲಿ ನಡೆಸಲಾಗುವ 10 ನೇ ಘಟಿಕೋತ್ಸವ ಸಮಾರಂಭದಲ್ಲಿ ಸ್ನಾತಕ/ಸ್ನಾತಕೋತ್ತರ ಪದವಿಗಳಲ್ಲಿ Rank ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡುವ ಸಲುವಾಗಿ ಚಿನ್ನದ ಪದಕ ತಯಾರಿಸುವ ಸಂಸ್ಥೆಯವರಿಂದ ಚಿನ್ನ ಖರೀದಿಸುವ ದಿನದ ದರಕ್ಕನುಗುಣವಾಗಿ ಇ-ಪೋರ್ಟಲ್ನಲ್ಲಿ ಟೆಂಡರ್ ಆಹ್ವಾನಿಸಬೇಕಾಗಿರುತ್ತದೆ. ಆದ್ದರಿಂದ ಟೆಂಡರ್ ಆಹ್ವಾನಿಸಲು **ದಿನಾಂಕ:14.11.2022**ರ ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದೆ.

ನಿರ್ಣಯ

ವಿಶ್ವವಿದ್ಯಾನಿಲಯದ 10ನೇ ಘಟಿಕೋತ್ಸವ ಸಮಾರಂಭದಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲು ಚಿನ್ನದ ಪದಕ ತಯಾರಿಸುವ ಸಂಸ್ಥೆಯವರಿಂದ ಚಿನ್ನ ಖರೀದಿಸುವ ದಿನದ ದರಕ್ಕನುಗುಣವಾಗಿ ಇ-ಟೆಂಡರ್ ಆಹ್ವಾನಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಮುಂದುವರೆದು, ಇನ್ನುಮುಂದೆ ಚಿನ್ನದ ಪದಕ ಪ್ರಾಯೋಜಿಸುವ ದಾನಿಗಳು ಪ್ರತೀ ಒಂದು ಚಿನ್ನದ ಪದಕ್ಕೆ ಕನಿಷ್ಠ ರೂ.1,00,000/-ಗಳನ್ನು ಕಡ್ಡಾಯವಾಗಿ ಮೊತ್ತವನ್ನು ಪಾವತಿಸುವಂತೆ ಹಾಗೂ ಪ್ರಸ್ತುತ ಸಾಲಿನಲ್ಲಿಯೇ ಚಿನ್ನದ ಪದಕ ವಿತರಸಬೇಕೆಂದರೆ ರೂ.10,000/-ಗಳ ಹೆಚ್ಚುವರಿ ಮೊತ್ತವನ್ನು ನೀಡಬೇಕೆಂದು ಮತ್ತು ಚಿನ್ನದ ಬೆಲೆ ಹೆಚ್ಚಾಗಿರುವುದರಿಂದ ಈ ಹಿಂದೆ ಚಿನ್ನದ ಪದಕ ನೀಡಲಾದ ದಾನಿಗಳಿಗೆ ವ್ಯತ್ಯಾಸದ ಮೊತ್ತಕ್ಕೆ ಸಂಬಂಧಿಸಿದಂತೆ ಪತ್ರಿಸಲು ಕ್ರಮಕೈಗೊಳ್ಳುವಂತೆ ಸಭೆಯು ನಿರ್ಣಯಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(f)/(11/22) |

## –ಃಟಿಪ್ಪಣಿಃ–

**ವಿಷಯಃ** ವಿಶ್ವವಿದ್ಯಾನಿಲಯದ ಗೌರವ ಸೂಚಕ ಬಿರುದು – 'ಬೆಳ್ಳಿ ಗದೆ' ಯನ್ನು (ವಿಶ್ವವಿದ್ಯಾನಿಲಯದ ಲಾಂಛನವುಳ್ಳ ಬೆಳ್ಳಿ ಗದೆ) ಖರೀದಿಸಲು ಸಿಂಡಿಕೇಟ್ ಅನುಮೋದನೆ ಕುರಿತು.

**ಉಲ್ಲೇಖ: ಸಿಂಡಿಕೇಟ್ ಅನುಮೋದನೆ ದಿನಾಂಕ:22-03-2021 (ವಿಷಯ ಸಂಖ್ಯೆ:03(e)/ (03/21)**

*****

ವಿಶ್ವವಿದ್ಯಾನಿಲಯದಲ್ಲಿ ಜರುಗಿದ 09 ನೇ ಘಟಿಕೋತ್ಸವ ಕಾರ್ಯಕ್ರಮಕ್ಕೆ ಅಂದಾಜು 2.5 ಕೆ.ಜಿ. ತೂಕದ ಬೆಳ್ಳಿ ಗದೆಯನ್ನು ಖರೀದಿಸಲು ಉಲ್ಲೇಖಿತ ಸಿಂಡಿಕೇಟ್ ಸಭೆಯ ಉಲ್ಲೇಖಿತ ದಿನಾಂಕ:22.03.2021ರಂದು ಅನುಮೋದನೆ ಪಡೆಯಲಾಗಿತ್ತು.

ಆದರೆ ಕಾರಣಾಂತರಗಳಿಂದ ಸದರಿ ಘಟಿಕೋತ್ಸವದಂದು ಬೆಳ್ಳಿ ಗದೆ ಖರೀದಿಸಲಾಗಿರುವುದಿಲ್ಲ. ಮುಂಬರುವ 10ನೇ ಘಟಿಕೋತ್ಸವ ಸಮಾರಂಭಕ್ಕೆ ಅಂದಾಜು 2.5 ಕೆ.ಜಿ. ತೂಕದ ಬೆಳ್ಳಿ ಗದೆಯನ್ನು ಬೆಳ್ಳಿ ಖರೀದಿಸುವ ದಿನದ ದರಕ್ಕನುಗುಣವಾಗಿ ಬೆಳ್ಳಿ ಗದೆ ಮಾಡಿಸಲು **ದಿನಾಂಕ:14.11.2022ರ** ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದೆ.

## ನಿರ್ಣಯ

ವಿಶ್ವವಿದ್ಯಾನಿಲಯದ ಗೌರವ ಸೂಚಕ ಬಿರುದು – 'ಬೆಳ್ಳಿ ಗದೆ' ಯನ್ನು (ವಿಶ್ವವಿದ್ಯಾನಿಲಯದ ಲಾಂಛನವುಳ್ಳ ಬೆಳ್ಳಿ ಗದೆ) ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭಕ್ಕೆ ಅವಶ್ಯಕವಾಗಿರುವುದರಿಂದ ಅಂದಾಜು 2.5 ಕೆ.ಜಿ. ತೂಕದ ಬೆಳ್ಳಿ ಗದೆಯನ್ನು ಬೆಳ್ಳಿ ಖರೀದಿಸುವ ದಿನದ ದರಕ್ಕನುಗುಣವಾಗಿ ಖರೀದಿಸಿ ಬೆಳ್ಳಿ ಗದೆ ಮಾಡಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(g)/(11/22) |

—ಃಟಿಪ್ಪಣಿಃ—

**ವಿಷಯಃ** ಪರೀಕ್ಷಾಂಗ ವಿಭಾಗದ ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆಗಳ ಬಿಲ್ಲುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಹಣ ಪಾವತಿಸುವ ಸಂಬಂಧ ದಿನಾಂಕ:23.09.2022 ರಂದು ಜರುಗಿದ ಉಪಸಮಿತಿಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

*****

ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾಂಗ ವಿಭಾಗದ ಇ–ಟೆಂಡರ್‌ನಲ್ಲಿ ಯಶಸ್ವಿಯಾದ ಸಂಸ್ಥೆಗಳ ಬಿಲ್ಲುಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಹಣ ಪಾವತಿಸುವ ಸಂಬಂಧ ದಿನಾಂಕ:23.09.2022 ರಂದು ಜರುಗಿದ ಉಪಸಮಿತಿಯ ನಡಾವಳಿಗಳನ್ನು **ದಿನಾಂಕ:14.11.2022**ರ ಸಿಂಡಿಕೇಟ್ ಸಭೆಯ ಅವಗಾಹನೆ ಹಾಗೂ ಅನುಮೋದನೆಗೆ ಮಂಡಿಸಿದೆ.

<u>ಬಿಲ್ಲುಗಳ ವಿವರ</u>

| | | |
|---|---|---|
| **8ನೇ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ** | | |
| 1. | ಶಾಮಿಯಾನ ವೆಚ್ಚ | ರೂ.5,86,548–00 |
| 2. | ಊಟದ ವೆಚ್ಚ | ರೂ.1,87,030–00 |
| **9ನೇ ಘಟಿಕೋತ್ಸವಕ್ಕೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ** | | |
| 1. | ಶಾಮಿಯಾನ ವೆಚ್ಚ | ರೂ.6,39,029–00 |
| 2. | ಊಟದ ವೆಚ್ಚ | ರೂ.3,98,899–00 |

<u>ನಿರ್ಣಯ</u>

ದಿನಾಂಕ:23.09.2022 ರಂದು ಜರುಗಿದ ಉಪಸಮಿತಿಯ ಶಿಫಾರಸ್ಸಿನಂತೆ ಸಂಬಂಧಿಸಿದ ಸಂಸ್ಥೆಗಳೊಂದಿಗೆ ಚರ್ಚಿಸಿ ದರಗಳನ್ನು ಕಡಿಮೆ ಮಾಡಿ ಪಾವತಿಸುವಂತೆ ಸಭೆಯು ಸುಧೀರ್ಘ ಚರ್ಚೆಯ ನಂತರ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(h)/(11/22) |

–ಃಟಿಪ್ಪಣಿಃ–

**ವಿಷಯಃ** ವಿಶ್ವವಿದ್ಯಾನಿಲಯದ ವತಿಯಿಂದ ಏರ್ಪಡಿಸಲಾಗುವ ಸೆಮಿಸ್ಟರ್/ ವಾರ್ಷಿಕ ಪದ್ಧತಿಯ ಪರೀಕ್ಷೆಗಳಲ್ಲಿ ಪರೀಕ್ಷಾ ಕೇಂದ್ರದಲ್ಲಿ – ಪರೀಕ್ಷೆಗಳ ಕಾರ್ಯದಲ್ಲಿ ನಿರತರಾದ ಸಿಬ್ಬಂಧಿಗಳಿಂದ ಪರೀಕ್ಷಾ ನಿಯಮಗಳ ಉಲ್ಲಂಘನೆ, ಅಸಭ್ಯ ವರ್ತನೆ ಮತ್ತು ಅಶಿಸ್ತುಗಳಿಗೆ ಸಂಬಂಧಿಸಿದ ಆಧ್ಯಾದೇಶಗಳು.

–******–

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಘಟಕ ಕಾಲೇಜುಗಳು/ಸಂಲಗ್ನ ಕಾಲೇಜುಗಳು/ ಸ್ನಾತಕೋತ್ತರ ವಿಭಾಗಗಳಲ್ಲಿ ಪರೀಕ್ಷೆಗಳನ್ನು (ಸೆಮಿಸ್ಟರ್/ನಾನ್ ಸೆಮಿಸ್ಟರ್) ಏರ್ಪಡಿಸಲಾದ ಸಂದರ್ಭಗಳಲ್ಲಿ – ವಿಶ್ವವಿದ್ಯಾನಿಲಯದ ವತಿಯಿಂದ ಪರೀಕ್ಷಾ ಕಾರ್ಯಗಳ ನಿಮಿತ್ತ ನಿಯೋಜಿಸಲ್ಪಟ್ಟ ಬೋಧಕ/ಬೋಧಕೇತರರ ಸಿಬ್ಬಂದಿಯವರಿಂದ ಕರ್ತವ್ಯ ನಿರ್ವಹಣೆಯಲ್ಲಿ ಉದ್ಭವಿಸಿದ ಲೋಪದೋಷಗಳ ಬಗ್ಗೆ, ಅನುಚಿತ/ಅಸಭ್ಯ ವರ್ತನೆಗಳು ಘಟಿಸಿದ ಸಂದರ್ಭದಲ್ಲಿ ಅನುಸರಿಸಲಾಗುವ ನಿಯಮಗಳು ಮತ್ತು ಶಿಕ್ಷೆಯನ್ನು ವಿಧಿಸುವ ಆಧ್ಯಾದೇಶಗಳು (Ordinances) (ಸದರಿ ಆಧ್ಯಾದೇಶಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000, ಸೆಕ್ಷನ್ 42 ರನ್ವಯ ರಚಿಸಲಾಗಿದೆ.)

"ORDINANCES GOVERNING THE ACTS OF PUNISHMENT FOR BREACH OF DUTIES, MISBEHAVIOUR AND INDISCIPLINE BY PERSONS INVOLVED IN UNIVERSITY EXAMINATION WORK"

ಸದರಿ ಆಧ್ಯಾದೇಶಗಳನ್ನು ದಿನಾಂಕ:13.10.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಮೇಲ್ಕಂಡ ಸದರಿ ಆಧ್ಯಾದೇಶಗಳನ್ನು **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

ನಿರ್ಣಯ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000, ಸೆಕ್ಷನ್ 42 ರನ್ವಯ ವಿಶ್ವವಿದ್ಯಾನಿಲಯದಲ್ಲಿ ರಚಿಸಲಾಗಿರುವ "ORDINANCES GOVERNING THE ACTS OF PUNISHMENT FOR BREACH OF DUTIES, MISBEHAVIOUR AND INDISCIPLINE BY PERSONS INVOLVED IN UNIVERSITY EXAMINATION WORK" ಆಧ್ಯಾದೇಶಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(i)/(11/22) |

## –:ಟಿಪ್ಪಣಿ:–

**ವಿಷಯ:** ವಿಶ್ವವಿದ್ಯಾನಿಲಯದ ವತಿಯಿಂದ ಏರ್ಪಡಿಸಲಾಗುವ ಸೆಮಿಸ್ಟರ್/ ವಾರ್ಷಿಕ ಪದ್ಧತಿಯ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಪುನಃ ಮೌಲ್ಯಮಾಪನ (Revaluation) ಮತ್ತು ಸವಾಲು (Challenge) ಮೌಲ್ಯಮಾಪನಗಳಿಗೆ ಸಂಬಂಧಿಸಿದ ಆಧ್ಯಾದೇಶಗಳು.

–*****–

**ಪ್ರಸ್ತಾವನೆ:**

ವಿಶ್ವವಿದ್ಯಾನಿಲಯದ ವತಿಯಿಂದ ಏರ್ಪಡಿಸಲಾಗುವ ಸೆಮಿಸ್ಟರ್/ ವಾರ್ಷಿಕ ಪದ್ಧತಿಯ ಪರೀಕ್ಷೆಗಳ ಉತ್ತರ ಪತ್ರಿಕೆಗಳ ಪುನಃ ಮೌಲ್ಯಮಾಪನ (Revaluation) ಮತ್ತು ಸವಾಲು (Challenge) ಮೌಲ್ಯಮಾಪನ ಮಾಡುವ ಸಂಬಂಧ ಅನುಸರಿಸಬಹುದಾದ ಕ್ರಮ/ಪದ್ಧತಿ/ವಿಧಾನಗಳು ಮತ್ತು ಶುಲ್ಕ ಪಾವತಿ ಸಂಬಂಧದ ಕರಡು ಆಧ್ಯಾದೇಶ (Ordinance) ಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ಸೆಕ್ಷನ್ 42(1)(e) ರನ್ವಯ ರಚಿಸಲಾಗಿದೆ.

"DRAFT ORDINANCES GOVERNING REVALUATION/CHALLENGE VALUATION OF ANSWER BOOKS OF THE UNIVERSITY EXAMINATIONS"

ಸದರಿ ಆಧ್ಯಾದೇಶಗಳನ್ನು ದಿನಾಂಕ:13.10.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಮೇಲ್ಕಂಡ ಸದರಿ ಆಧ್ಯಾದೇಶಗಳನ್ನು **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

**ನಿರ್ಣಯ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ಸೆಕ್ಷನ್ 42(1)(e) ರನ್ವಯ ವಿಶ್ವವಿದ್ಯಾನಿಲಯದಲ್ಲಿ ರಚಿಸಲಾಗಿರುವ "DRAFT ORDINANCES GOVERNING REVALUATION/CHALLENGE VALUATION OF ANSWER BOOKS OF THE UNIVERSITY EXAMINATIONS" ಆಧ್ಯಾದೇಶಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(j)/(11/22) |

–ಃಟಿಪ್ಪಣಿಃ–

ವಿಷಯಃ ವಿಶ್ವವಿದ್ಯಾನಿಲಯದ ವತಿಯಿಂದ ಏರ್ಪಡಿಸಲಾಗುವ ಸೆಮಿಸ್ಟರ್/ ವಾರ್ಷಿಕ ಪರೀಕ್ಷೆಗಳಲ್ಲಿ ಅಶಿಸ್ತು ಮತ್ತು ದುಷ್ಕೃತ್ಯಗಳನ್ನು ನಿರ್ಭಂಧಿಸುವ ಮತ್ತು ಶಿಕ್ಷೆಗಳನ್ನು ವಿಧಿಸುವ ಸಂಬಂಧದ ವಿನಿಯಮಗಳು

–*****–

ಪ್ರಸ್ತಾವನೆ:

ವಿಶ್ವವಿದ್ಯಾನಿಲಯದ ವತಿಯಿಂದ ಏರ್ಪಡಿಸುವ ವಾರ್ಷಿಕ ಪರೀಕ್ಷೆಗಳು/ಸೆಮಿಸ್ಟರ್ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಎಸಗುವ ದುಷ್ಕೃತ್ಯಗಳನ್ನು ನಿರ್ಭಂದಿಸುವ ಮತ್ತು ದುಷ್ಕೃತ್ಯಗಳು ಘಟಿಸಿದಲ್ಲಿ ಅನುಸರಿಸಬಹುದಾದ ಕ್ರಮಗಳು ಮತ್ತು ಶಿಕ್ಷೆಗಳನ್ನು ವಿಧಿಸುವ ಸಂಬಂಧದ ಕರಡು ವಿನಿಯಮಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ಸೆಕ್ಷನ್ 44 ರನ್ವಯ ರಚಿಸಲಾಗಿದೆ.

"REGULATIONS GOVERNING THE ACTS OF INDISCIPLINE AND MALPRACTICE IN THE DAVANGERE UNIVERSITY EXAMINATIONS"

ಸದರಿ ವಿನಿಯಮಗಳನ್ನು ದಿನಾಂಕ:13.10.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ.

ಮೇಲ್ಕಂಡ ಸದರಿ ವಿನಿಯಮಗಳನ್ನು **ದಿನಾಂಕ:14.11.2022** ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಿದೆ.

ನಿರ್ಣಯ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ಸೆಕ್ಷನ್ 44 ರನ್ವಯ ವಿಶ್ವವಿದ್ಯಾನಿಲಯದಲ್ಲಿ ರಚಿಸಲಾಗಿರುವ "REGULATIONS GOVERNING THE ACTS OF INDISCIPLINE AND MALPRACTICE IN THE DAVANGERE UNIVERSITY EXAMINATIONS" ವಿನಿಯಮಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.03(k)/(11/22) |

## –ಃಟಿಪ್ಪಣಿಃ–

**ವಿಷಯಃ** ವಿಶ್ವವಿದ್ಯಾನಿಲಯದಲ್ಲಿ 2022–23 ನೇ ಸಾಲಿನಲ್ಲಿ ಏರ್ಪಡಿಸಲಾಗಿರುವ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, M/S;Unicalre Solutions Pvt Ltd, Bangalore ಇವರಿಗೆ ಪರೀಕ್ಷಾ ತಂತ್ರಾಂಶ ಅಳವಡಿಸಿರುವ ಮಾರ್ಚ್/ಏಪ್ರೀಲ್ 2022ರ ಪರೀಕ್ಷೆಯ ಅಂತಿಮ 4ನೇ ಕಂತಿನ ಬಾಬ್ತು ಶೇ.10% ರಷ್ಟು ರೂ.6,24,472/– ಗಳನ್ನು ಪಾವತಿ ಮಾಡುವ ಬಗ್ಗೆ.

–*****–

ವಿಶ್ವವದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ, 2018–19 ನೇ ಸಾಲಿನಿಂದ ಪರೀಕ್ಷಾ ಫಲಿತಾಂಶದಲ್ಲಿ ಸುಧಾರಣೆ ಹಾಗೂ ತ್ವರಿತವಾಗಿ ಫಲಿತಾಂಶವನ್ನು ನೀಡುವ ಸಲುವಾಗಿ ಇ–ಟೆಂಡರ್ ನಲ್ಲಿ ಯಶಸ್ವಿಯಾದ ಸಂಸ್ಥೆ M/S;Unicalre Solutions Pvt Ltd, Bangalore ಇವರಿಂದ ಹೊಸ ಪರೀಕ್ಷಾ ತಂತ್ರಾಂಶ E-Governace ಗೆ ಸಂಬಂಧಪಟ್ಟಂತೆ ಅಳವಡಿಸಿಕೊಂಡು ಪ್ರತಿ ವಿದ್ಯಾರ್ಥಿಗೆ ರೂ.127/– ರಂತೆ 47,038 ವಿದ್ಯಾರ್ಥಿಗಳ ಒಟ್ಟು ಮೊತ್ತ ರೂ;59,73,826/–ಗಳಾಗಿರುತ್ತದೆ, ಮಾರ್ಚ್/ಏಪ್ರಿಲ್–2022 ರ ಪರೀಕ್ಷಾ ಕಾರ್ಯ ನಿರ್ವಹಿಸಿದ ಸದರಿ ಸಂಸ್ತೆಯಾದ M/S;Unicalre Solutions Pvt Ltd, Bangalore ರವರಿಗೆ, ಈಗಾಗಲೇ 1ನೇ, 2ನೇ ಮತ್ತು 3ನೇ ಕಂತಿನವರೆಗೆ ಶೇಕಡ ಪ್ರತಿ ಕಂತಿಗೆ 30ರಷ್ಟು ಹಣವನ್ನು ಪಾವತಿಸಿದ್ದು, ಸದರಿ ಸಂಸ್ಥೆಯವರಿಗೆ ನಾಲ್ಕನೇ ಕಂತಿನ ಅಂತಿಮ ಬಿಲ್ಲಿನ ಮೊತ್ತ ರೂ.6,24,472/–(ಆರು ಲಕ್ಷದ ಇಪ್ಪತ್ನಾಲ್ಕು ಸಾವಿರದ ನಾಲ್ಕು ನೂರಾ ಎಪ್ಪತ್ತೇರೆಡು ಮಾತ್ರ ) ಗಳನ್ನು ಪಾವತಿಸಲು **ದಿನಾಂಕ:14–11–2022** ರಂದು ನಡೆಯುವ ಸಿಂಡಿಕೇಟ್ ಸಭೆಯ ಅವಾಗಹನೆಗೆ ಮತ್ತು ಅನುಮೋದನೆಗೆ ಮಂಡಿಸಲು ಕೋರಿದೆ.

## ನಿರ್ಣಯ

